ಶ್ರೀ ವೇದಾಂತ ಹೆಮ್ಮಿಗೆ —ಮಾನ್ಯ ಅಧ್ಯಕ್ಷರೆ, ಈ ಕೆಲಸಕ್ಕೆ ಹಳ್ಳಿಗಾಡಿನಲ್ಲಿ ಬರತಕ್ಕ ಜನ ಬಡವರೂ, ಮಧ್ಯಮ ವರ್ಗದವರು ಬರುವುದಿಲ್ಲ. ಯಾರು ಹೊಟ್ಟೆ ಬಟ್ಟೆಗೆ ಕಷ್ಟ ಪಡುತ್ತಾರೆ ಎಸ್. ಎಸ್. ಎಲ್. ಸಿ. ಪಾಸು ಮಾಡಿಕೊಂಡು ಜೀವನಕ್ಕೆ ತೊಂದರೆ ಪಡುತ್ತಾರೆ ಅಂತಹವರು ಈ ಕೆಲಸಕ್ಕೆ ಬರುತ್ತಾರೆ. ಅವರಿಗೆ ಪಾಸಕ್ಕೆ ಅನುಕೂಲ ಮಾಡಿಕೊಡುವುದು ಒಳ್ಳೆಯದು. ಯಾರು ಹಳ್ಳಿಗಾಡಿನ ವಂಕ್ಯಳ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾರೆ, ಭವಿಷ್ಯದ ಜನಾಂಗವನ್ನು ರೂಪಿಸತಕ್ಕಂಥ ಶಿಲ್ಪಿಗಳು ಯಾರಿದ್ದಾರೆ. ಅಂತಹವರ ಯೋಗಕ್ಷೇಮವನ್ನು ಮತ್ತು ಅವರ ಮನಸ್ಸನ್ನು ತೃಪ್ತಿಯಾಗುವಂತೆ ಸಂಬಳ ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಈ ದೃಷ್ಟಿಯಿಂದ ಗೌರವ ಧನವನ್ನು ಆದಷ್ಟು ಬೇಗ ಜಾಸ್ತಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ? ನಾನು ಮೊದಲೇ ಹೇಳಿದಂತೆ ರಾಜ್ಯದ ಎಲ್ಲಾ ಹಳ್ಳಿಗಳಲ್ಲಿಯೂ ಅಂಗನವಾಡಿಗಳನ್ನು ತೆಗೆಯುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ ? ಅಂಗನವಾಡಿಗೆ ಕನ್ನಡದ ಹೆಸರನ್ನು ನಾಮಕರಣ ಮಾಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಸದಸ್ಯರ ಕಳಕಳಿ ಸರ್ಕಾರಕ್ಕೆ ಇದೆ. ಈ ವಿಚಾರದಲ್ಲಿ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ. ಅಂಗನವಾಡಿ ಹೆಸರನ್ನು ಬದಲಾವಣೆ ಮಾಡುವ ಬಗ್ಗೆ ವಿಚಾರಣೆ ಮಾಡುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಅಂಗನವಾಡಿ ಯೋಜನೆಯ ಅಡಿಯಲ್ಲಿ ಸೇರಿಸಿಕೊಳ್ಳಬೇಕೆಂದು ಒತ್ತಾಯ ಮಾಡಿದ್ದೆವು. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೆ, ಸಮಗ್ರ ಬಾಲವಿಕಾಸ ಯೋಜನೆಯನ್ನು ಕಾರ್ಯ ರೂಪಕ್ಕೆ ತರಬೇಕಾದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸೇರಿ ಕೆಲವೊಂದು ಕ್ರೈಟೀರಿಯಾವನ್ನು ಅಳವಡಿಸಿವೆ. ಅದರ ಪ್ರಕಾರ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಅಲ್ಲಿ ಇರಬೇಕು. ಆ ಜಿಲ್ಲೆ ಡ್ರಾಟ್ ಏರಿಯಾ ಆಗಿರಬೇಕು. ಅಂತಹ ಪ್ರದೇಶಗಳನ್ನು ನೋಡಿಕೊಂಡೂ ಈ ಕಾರ್ಯಕ್ರಮವನ್ನು ಜಾರಿ ಮಾಡಬೇಕಾಗಿದೆ. ೮೮-೮೯ನೇ ಸಾಲಿನಲ್ಲಿ ಕೆಲವು ಪುರೋಗಾಮಿ ನಿರೀಕ್ಷೆ ಇದೆ.

೧೯೮೬-೮೭ ಮತ್ತು ೧೯೮೭-೮೮ರಲ್ಲಿ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಬಿಡುಗಡೆ ಆದ ಹಣದ ಬಗ್ಗೆ

೧೯೧೦. ಶ್ರೀಮತಿ ಸುಮಾ ವಸಂತ.—ಮಾನ್ಯ ರಾಜ್ಯ ಮುಜರಾಯಿ ಇಲಾಖೆಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪಂಚಪಾರಂಪರ್ಯದ ಆಡಳಿತಕ್ಕೊಳಪಟ್ಟಿರುವ ಹಾಗೂ ಇಲಾಖೆಯ ನಿಯಂತ್ರಣದಲ್ಲಿರುವ ದೇವಾಲಯಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

ಆ) ೧೯೮೬-೮೭ ಮತ್ತು ೧೯೮೭-೮೮ರಲ್ಲಿ ಸದರಿ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಬಿಡುಗಡೆ ಮಾಡಿದ ಹಣವೆಷ್ಟು ; (ದೇವಸ್ಥಾನವಾರು, ತಾಲ್ಲೂಕುವಾರು ಹಾಗೂ ಜಿಲ್ಲಾವಾರು ವಿವರ ನೀಡುವುದು)

ಶ್ರೀ ಕೆ. ಅಮರನಾಥ್ ಶೆಟ್ಟಿ (ಮುಜರಾಯಿ ಸಚಿವರು)—

ಅ) ಪಂಚಪಾರಂಪರ್ಯದ ಆಡಳಿತಕ್ಕೆ ಒಳಪಟ್ಟಿರುವ ದೇವಸ್ಥಾನಗಳ ಸಂಖ್ಯೆ ೧೪,೬೮೮ ಇಲಾಖೆಯ ನಿಯಂತ್ರಣದಲ್ಲಿರುವ ದೇವಸ್ಥಾನಗಳ ಸಂಖ್ಯೆ ೨೬,೧೭೨. ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ.

ಆ) ೧೯೮೬-೮೭ ಮತ್ತು ೧೯೮೭-೮೮ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಬಿಡುಗಡೆ ಮಾಡಿದ ಹಣದ ವಿವರ ಈ ಕೆಳಕಂಡಂತೆ ಇದೆ.

೧೯೮೬-೮೭

ಸಂಸ್ಥೆಗಳು	ವರ್ಷ	೧೯೮೬-೮೭	ಮಂಜೂರಾದ ಹಣ
ಸರ್ಕಾರದಿಂದ	೪೯೮	ಸಂಸ್ಥೆಗಳಂ	ರೂ ೧,೧೮,೨೨,೫೦೦-೦೦
ಮಂಜರಾಯಿ	೨೦೪	,,	ರೂ ೧೯,೭೯,೫೦೦-೦೦
ಆಯಂಕ್ಕರಿಂದ			
ಒಟ್ಟು	೭೦೨	,,	ರೂ. ೧,೩೮,೦೨,೦೦೦-೦೦

೧೯೮೭-೮೮

ಸರ್ಕಾರದಿಂದ	೫೮೯	ಸಂಸ್ಥೆಗಳಂ	ರೂ. ೧,೮೪,೫೦,೦೦೦-೦೦
ಮಂಜರಾಯಿ	೧೮೨	,,	ರೂ, ೨೫,೦೦,೦೦೦-೦೦
ಆಯಂಕ್ಕರಿಂದ			
ಒಟ್ಟು	೭೭೧	,,	ರೂ. ೨,೦೯,೫೦,೦೦೦-೦೦

Sl. No.	District	No. of Institutions under the Management of Govt.	No. of Institutions under hereditary management	Total
1	Bangalore (Urban)	1084	—	1084
2	Bangalore (Rural)	2086	—	2086
3	Belgaum	1779	2679	4458
4	Bijapur	767	1371	2138
5	Bidar	1000	72	1072
6	Bellary	608	4	612
7	Kolar	2397	—	2397
8	Uttara Kannada	911	107	1018
9	Dharwad	1734	2045	3779
10	Chitradurga	533	—	533
11	Chikmagalore	815	3	818
12	Kodagu	10	—	10
13	Gulbarga	39	3557	3596
14	Hassan	2583	—	2583
15	Mandya	1913	—	1913
16	Mysore	1712	10	1722
17	Mangalore Dakshina Kannada	2180	28	2208
18	Raichur	50	4729	4779
19	Tumkur	2573	3	2576
20	Shimoga	1398	—	1398
	Total	26172	14608	40780

Particulars of Grants sanctioned for repairs and renovation to Religious Institutions during the year 1986-87

Sl. No.	District	Total No. of Institutions	Sanctioned by Government			Sanctioned by Endowmetn Commissioner		
			No. of Applns. received	No. of Intns. Grants Sanction	Amount Sanct-ioned	No. of Applns. received	Grants sanct-ioned to No. of Instns.	Amount Sanct-ioned
1	Bangalore	3170	24	20	5,99,000	16	16	1,64,000
2	Belgaum	4458	114	46	11,75,000	10	9	85,000
3	Bellary	612	66	22	4,90,000	9	4	50,000
4	Bidar	1072	14	11	3,60,000	6	6	70,000
5	Bijapur	2138	26	23	6,85,000	5	5	60,000
6	Chikmagalur	818	16	16	4,68,500	6	6	53,500
7	Chitradurga	533	22	18	6,00,000	16	13	1,40,000
8	Dharwad	3779	45	44	13,10,000	15	11	1,75,000
9	Dakshina Kannada	2208	33	31	6 40,000	7	2	20,000
10	Gulbarga	3596	35	33	8,78,000	7	4	38,000
11	Hassan	2583	40	34	7,77,000	25	18	1,50,000
12	Kodagu	10	12	11	2,68,000	4	4	43,000
13	Kolar	2397	19	17	6,08,000	9	6	68,000
14	Mandya	1913	40	37	9,23,000	14	13	1,30,000
15	Mysore	1723	15	15	5,68,000	12	8	90,000
16	Raichur	4779	42	39	10,59,500	60	30	3,04,500
17	Shimoga	1398	27	26	6,69,400	15	12	1,09,000
18	Tumkur	2576	29	28	5,49,500	24	18	1,79,500
19	Uttara Kannada	1018	24	24	8,75,000	1	1	10,000

Out of state 3 institutions grant sanctioned Rs. 2,79,500

Particulars of Grants sanctioned for repairs and renovation to religious Institutions during the year 1987-88

1	2	3	4	5	6	7	8	9
1	Bangalore (R)	2086	30	26	6 50,000	16	8	1,05,000
2	Bangalore (U)	1084	27	12	9,35,000	14	12	1,73,800
3	Belgaum	4458	45	45	16,10,000	21	14	1,80,000
4	Bellary	612	32	25	6,10,000	10	7	1,16,000
5	Bidar	1072	21	11	2,95,000	3	3	55,000
6	Bijapur	2138	19	17	4,65,000	11	10	1 44,000
7	Chikmagalur	818	19	17	6,45,000	3	3	50,500
8	Chitradurga	533	20	18	4,55,000	9	8	98,000
9	Dharwad	3779	23	17	15,70,000	20	9	1,72,000
10	Dakshina Kannada	2208	89	77	23,20,000	10	5	85,000
11	Gulbarga	3596	45	42	11,20,000	14	12	1,81,000
12	Hassan	2583	32	25	6,65,000	14	7	86,750
13	Kodagu	10	19	16	4,50,000	2	2	26,0 0
14	Kolar	2397	29	21	4,10,000	11	9	1,15,750
15	Mandya	1913	35	27	7,45,000	18	12	1,41,500
16	Mysore	1722	34	29	6,10,000	15	8	1,06,500
17	Raichur	4779	38	31	9,45,000	32	21	2,43,000
18	Shimoga	1398	23	21	5,85,000	13	10	1,19,300
19	Tumkur	2576	33	30	7,05,000	32	18	2,19,500
20	Uttara Kannada	1618	28	27	9,15,000	4	4	76,500

Grants sanctioned to Institutions at Polali, Madhur and Udupi Gold Chariot sanctioned Rs. 5 lakhs each as a special case.

೯–೩೦ ಎ. ಎಂ.

ಶ್ರೀಮತಿ ಸುಮಾವಸಂತ.—ಮಾನ್ಯ ಅಧ್ಯಕ್ಷರೇ, ದೇವಸ್ಥಾನಗಳ ಜೀರ್ಣೋಧ್ಧಾರಕ್ಕಾಗಿ ಬಿಡುಗಡೆ ಮಾಡಿದಂಥ ಹಣವನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ಹಣವನ್ನು ಜಿಲ್ಲಾವಾರು ಬಿಡುಗಡೆ ಮಾಡಿದ್ದಾರೆಯೇ ?

ಶ್ರೀ ಕೆ. ಅಮರನಾಥ ಶೆಟ್ಟಿ.—ಜಿಲ್ಲಾವಾರು ಪಟ್ಟಿಯನ್ನು ಇದರ ಜೊತೆ ಲಗತ್ತಿಸಿದೆ. ಅದನ್ನು ತಮಗೆ ಓದಿ ಹೇಳಬೇಕೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರ ಜಿಲ್ಲೆಯದನ್ನು ಹೇಳಿ ಸಾಕು.

ಶ್ರೀ ಕೆ. ಅಮರನಾಥ ಶೆಟ್ಟಿ.—೧೯೮೭-೮೭ನೇ ಸಾಲಿನಲ್ಲಿ ಕೊಡಗು ಜಿಲ್ಲೆಗೆ ೨.೬೨ ಲಕ್ಷ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದ್ದೇವೆ. ೧೨ ಸಂಸ್ಥೆಗಳ ಪೈಕಿ ೧೧ ಸಂಸ್ಥೆಗಳಿಗೆ ಸ್ಯಾಂಕ್ಷನ್ ಮಾಡಿದೆ. ಮುಜರಾಯಿ ಆಯುಂಕ್ತರು ೪ ಕೈ ೪೩ ಸಾವಿರ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆ. ೮೭–೮೮ರಲ್ಲಿ ೧೯ ಅರ್ಜಿಗಳು ಬಂದಿವೆ. ಅದರಲ್ಲಿ ೧೬ಕ್ಕೆ ೪.೬೦ ಲಕ್ಷ ರೂಪಾಯಿಗಳ ಸ್ಯಾಂಕ್ಷನ್ ಕೊಟ್ಟಿದೆ. ಮುಜರಾಯಿಯಿಂದ ೨ ಅರ್ಜಿಗಳು ಬಂದಿವೆ. ಅದರ ಪೈಕಿ ೨ಕ್ಕೂ ಸೇರಿ ೨೬ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ,

ಶ್ರೀಮತಿ ಸುಮಾವಸಂತ.—ವಂಶಪಾರಂಪರ್ಯ ಪದ್ಧತಿಗೆ ಒಳಪಟ್ಟಿರತಕ್ಕ ದೇವಸ್ಥಾನಗಳ ಅರ್ಚಕರಿಗೆ ಯಾವ ರೀತಿಯ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದೀರಿ ?

ಶ್ರೀ ಡಿ. ಎ. ಚಿನ್ನಪ್ಪ.—ದೇವಸ್ಥಾನಗಳಲ್ಲಿ ವಂಶಪಾರಂಪರ್ಯವಾಗಿ ಕೆಲಸ ಮಾಡತಕ್ಕ ಅರ್ಚಕರಿಗೆ ಕೆಲವರಿಗೆ ೫ ರೂಪಾಯಿ ಸಂಬಳ ಕೊಡುತ್ತಾರೆ, ಮತ್ತೆ ಕೆಲವರಿಗೆ ಅಕ್ಕಿ ಕೊಡುತ್ತಾರೆ. ಆದ್ದರಿಂದ ಇವರಿಗೆ ಏನಂ ಅನುಕೂಲ ಮಾಡಿಕೊಟ್ಟಿದ್ದೀರಿ ಎಂದು ಕೇಳುತ್ತಿದ್ದಾರೆ ?

ಶ್ರೀ ಕೆ. ಅಮರನಾಥ ಶೆಟ್ಟಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇದಕ್ಕೆ ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ.—ಸ್ವಾಮಿ, ತಲಕಾವೇರಿ ದೇವಸ್ಥಾನ ಬಹಳ ಪವಿತ್ರವಾದುದು. ಇದಕ್ಕೆ ನೀವು ಹಣವನ್ನು ಕೊಟ್ಟಿಲ್ಲ. ತಲಕಾವೇರಿ ಎಂದರೆ ನಮ್ಮ ಕರ್ನಾಟಕವನ್ನು ಉದ್ಧಾರ ಮಾಡತಕ್ಕ ದೇವತೆ. ಅಲ್ಲಿಗೆ ಕರ್ನಾಟಕದವರು ಯಾರೂ ಕೂಡ ಪ್ರವಾಸಿಗರು ಬರುವುದಿಲ್ಲ. ಇದಕ್ಕೆ ೨ ಕೋಟಿ ರೂಪಾಯಿಯ ಯೋಜನೆಯನ್ನು ಮಾಡಿದ್ದೇವೆ. ಇದಕ್ಕೆ ತಾವು ಹಣವನ್ನು ಕೊಟ್ಟು ಇದನ್ನು ಇಂಪ್ರೂವ್ ಮಾಡಬೇಕು. ನಮ್ಮ ಕರ್ನಾಟಕದ ಜನರು ಅಲ್ಲಿಗೆ ಯಾರೂ ಬರದಿದ್ದರೂ ತಮಿಳ್ನಾಡು, ಕೇರಳ ರಾಜ್ಯಗಳಿಂದ ಜಸ್ತಂ ಬರುತ್ತಾರೆ. ಅವರು ಬಂದರೆ ಇಲ್ಲಿ ಇರುವುದಕ್ಕೆ ಸ್ಥಳಾವಕಾಶ ಇಲ್ಲ. ಆದ್ದರಿಂದ ತಲಕಾವೇರಿಗೆ ಹಣವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಅಮರನಾಥ ಶೆಟ್ಟಿ.—ತಲಕಾವೇರಿ ಇಂಪ್ರೂವ್ ಮಾಡುವುದಕ್ಕೆಂದು ಇದುವರೆಗೂ ನನಗೆ ಒಂದು ಅರ್ಜಿ ಕೂಡ ಬಂದಿಲ್ಲ. ಆದರೂ ನಾನೇ ಸ್ವತಃ ಹೋಗಿ ಸಂಬಂಧ ಪಟ್ಟ ಜಿಲ್ಲಾಧಿಕಾರಿಯವರಿಗೆ ಹೇಳಿ ಒಂದು ಎಸ್ಟಿಮೇಟ್‌ನ್ನು ಮಾಡಿ ಕಳುಹಿಸಿಕೊಡಿ ಎಂದು ತಿಳಿಸಿ ಬಂದಿದ್ದೇನೆ.

ರಾಜ್ಯಾದ್ಯಂತ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಣಿ

೧೬೫೪. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ),—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯಾದ್ಯಂತ ಇರುವ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡಿರುವ ಪುರುಷ ಮತ್ತು ಮಹಿಳಾ ನಿರುದ್ಯೋಗಿಗಳ ಸಂಖ್ಯೆ ಎಷ್ಟು ?

(ಜಿಲ್ಲಾವಾರು ಮಾಹಿತಿ ನೀಡುವುದು)

ಆ) ೧೯೮೭–೮೮ನೇ ಸಾಲಿನಲ್ಲಿ ಉದ್ಯೋಗವನ್ನು ನೀಡಲಾಗಿರುವ ಜನರ ಸಂಖ್ಯೆ ಎಷ್ಟು ?